Dt 10.01.2024.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳಲ್ಕೆರೆ.

ಸಿ ಸಿ ನಂಃ 1609/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ಸಂತೋಷ್ | **ಪಿ.ಡಬ್ಲ್ಯೂ** | : 2 |
| ತಂದೆಯ ಹೆಸರು | : ಹನುಮಂತಪ್ಪ | ಸಿ.ಡಬ್ಲ್ಯೂ | : 2 |
| ವಯಸ್ಸು | : 20 ವರ್ಷ | ದಿನಾಂಕ | : 10.01.2024 |
| ಉದ್ಯೋಗ | : ವಿದಾರ್ಥಿ | | |
| ವಾಸಸ್ಥಳ | : ಹಿರೇಗುಂಟನೂರು ಗ್ರಾಮ | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ–**1** ಮತ್ತು **3** ನಮ್ಮ ಗ್ರಾಮಸ್ಥರು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ–**2** ಎಂದು ಗುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**2**(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ವಾಹನ ಪರಿಶೀಲನಾ ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ–**5** ಎಂದು ಗುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**5**(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ನಾಲ್ಕು ಪೋಟೋಗಳನ್ನು ತೋರಿಸಿದ್ದು, ಸದರಿ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ನಿಪಿ–**3,4** ಮತ್ತು **6** ಮತ್ತು **7** ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಪೊಲೀಸರು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಿಪಿ–**2** ಮತ್ತು **5** ಕ್ಕೆ ಈಗ್ಗೆ ಎರಡು ವರ್ಷಗಳ ಹಿಂದೆ ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ–**2** ಮತ್ತು **5** ರಲ್ಲಿ

Dt 10.01.2024.

ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ನಿಪಿ–**2** ಕ್ಕೆ ಪೊಲೀಸರಿಗೆ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–**2** ಮತ್ತು **5** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಾಹನಗಳನ್ನು ವಶಪಸಿಡಿಕೊಂಡಿಲ್ಲ. ಮತ್ತು ಪೊಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿಃ**11.04.2022** ರಂದು ಸಂಜೆ **05.00** ಗಂಟೆ ಸಮಯದಲ್ಲಿ ಚಾಸಾ–**1** ರವರು ಹೋಗುತ್ತಿದ್ದ ಟ್ರಾಕ್ಟರ್ ಮತ್ತು ಟ್ರೇಲರ್ ನ ಚಾಲಕ ಪ್ರದೀಪ್ ತಂದೆ ರಾಜಪ್ಪ ರವರು ಹಿರೇಕಂದವಾಡಿ ಗ್ರಾಮದ ಕಡೆಯಿಂದ ಬಿ.ದುರ್ಗ ಗ್ರಾಮದ ಕಡೆಗೆ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಪಲ್ಟಿಯಾದ ಸ್ಥಳ ಎಂದು ಚಾಸಾ–**1** ರವರ ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ–**3** ರವರ ಸಮಕ್ಷಮ ದಿಃ**22.04.2022** ರಂದು ಬೆಳಿಗ್ಗೆ **10.00** ರಿಂದ **11.00** ರವರೆಗೆ ನಿಪಿ–**2** ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–**2** ರ ಕಾಲಕ್ಕೆ ಪೊಲೀಸರು ನನ್ನ ಸಮಕ್ಷಮ ನಿಪಿ–**3** ಮತ್ತು **4** ರಂತೆ ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ದಿಃ**12.04.2022** ರಂದು ಈ ಪ್ರಕರಣದಲ್ಲಿ ಅಪಘಾತವಾದ ಟ್ರಾಕ್ಟರ್ ಮತ್ತು ಟ್ರೇಲರ್ ಅನ್ನು ಚಾಸಾ–**1** ರವರು ನಮ್ಮ ಸಮಕ್ಷಮ ನನ್ನ ಮತ್ತು ಚಾಸಾ–**3** ರವರ ಸಮಕ್ಷಮ ಗುರುತಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ–**1** ರವರ ತೋರಿಸಿದ ವಾಹನವನ್ನು ನನ್ನ ಮತ್ತು ಚಾಸಾ–**3** ರವರ ಸಮಕ್ಷಮ ಪೊಲೀಸರು ದಿಃ**12.04.2022** ರಂದು ಬೆಳಿಗೆಗ **11.30** ರಿಂದ ಮಧ್ಯಾಹ್ನ **12.15** ರವರೆಗೆ ಪೊಲೀಸರು ನಿಪಿ–**5** ರಂತೆ ವಾಹನ ಪರಿಶೀಲನಾ ಪಂಚನಾಮೆಯನ್ನು ಮಾಡಿರುತ–ªತರೆ ಎಂದರೆ ಸರಿಯಲ್ಲ. ನಿಪಿ–**5** ರ ಕಾಲಕ್ಕೆ ಸದರಿ ಟ್ರಾಕ್ಟರ್ ನ ಎರಡು ಪೋಟೋಗಳನ್ನು ನಿಪಿ–**6** ಮತ್ತು **7** ರಂತೆ ನಮ್ಮ ಸಮಕ್ಷಮ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

Dt 10.01.2024.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತು ನಿಪಿ–**2** ಮತ್ತು **5** ರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು: ಇಲ್ಲ:**

**ಮರು ವಿಚಾರಣೆ :ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊಳಲ್ಕೆರೆ.